ಕಾರಣವೇನು? ಸರಕಾರ ಸದನದಲ್ಲಿ 1995-96ನೇ ಸಾಲಿನಲ್ಲಿ ರಸ್ತೆ ಅಭಿವೃದ್ಧಿಗಾಗಿ 15 ಲಕ್ಷ ರೂಪಾಯಿಗಳ ಹಣವನ್ನು ಪ್ರತಿ ಶಾಸನಸಭಾ ಕ್ಷೇತ್ರದಲ್ಲಿ ಈ ಮಾರುಕಟ್ಟೆ ಸಮಿತಿ ವತಿಯಿಂದ ಖರ್ಚು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದು ನಿಜವೇ? ಹಾಗಾದರೆ ನೀವು ಕೊಟ್ಟ ಆಶ್ವಾಸನೆ ಏನಾಯಿತು?

ಶ್ರೀ ಹೆಚ್.ನಾಗಪ್ಪ:- ಪಟ್ಟಿಯನ್ನು ಕೊಡತಕ್ಕಂಥಾದ್ದರಲ್ಲಿ ಡಿಲೇ ಮಾಡಿದ್ದರಿಂದ ತಡವಾಗುತ್ತಿದೆ. 18-3-96ರಲ್ಲಿ ಹಾಸನ ಜಿಲ್ಲೆಯ ಎಲ್ಲಾ ಶಾಸಕರೂ ಕೂಡ ಆ ಪಟ್ಟಿಯನ್ನು ಕೊಟ್ಟು ಅದು ಅಪ್ರೂವ್ ಆಯಿತು. ಅದಾದ ಮೇಲೆ ಅರಕಲಗೂಡಿನದ್ದು ಕೂಡ ಪ್ರತ್ಯೇಕವಾಗಿ ಅಂದಾಜನ್ನು ಮಾಡಿ 27-6-96ರಲ್ಲಿ ಅನುಮೋದನೆಯಾಗಿ ಲೋಕೋಪಯೋಗಿ ಇಲಾಖೆಗೆ ಈಗಾಗಲೇ ಟೆಂಡರ್ ಕರೆಯುವುದಕ್ಕೆ ಕೊಟ್ಟಿದ್ದೇವೆ. ಲೋಕೋಪಯೋಗಿ ಇಲಾಖೆಗೆ ಈಗಾಗಲೇ 15 ಲಕ್ಷ ರೂಪಾಯಿಯನ್ನು ತುಂಬಿದ್ದೇವೆ.

ಶ್ರೀ ಎ.ಟಿ.ರಾಮಸ್ವಾಮಿ:- ಕಾಮಗಾರಿಗಳ ಕೆಲಸದ ಪಟ್ಟಿಯನ್ನು ನಾವು ಆ ಕೂಡಲೇ ಒದಗಿಸಿದ್ದೇವೆ. 1995-96ನೇ ಸಾಲಿನಲ್ಲಿ 15 ಲಕ್ಷ ಖರ್ಚು ಮಾಡುತ್ತೇವೆಂದು ಹೇಳಿದ್ದರು, ಖರ್ಚು ಮಾಡಲಿಲ್ಲ. ಕಾಮಗಾರಿಗಳೂ ಪ್ರಾರಂಭವಾಗಿಲ್ಲ. ಈಗ ಆ ಹಣವನ್ನು ಈ ವರ್ಷ ಖರ್ಚು ಮಾಡುತ್ತಾರಾ? ಈ ವರ್ಷದ್ದು 15 ಲಕ್ಷ ಕಳೆದ ವರ್ಷದ್ದು 15 ಲಕ್ಷ ಒಟ್ಟು 30 ಲಕ್ಷಗಳನ್ನು ಈ ವರ್ಷ ಖರ್ಚು ಮಾಡುತ್ತಾರಾ?

ಶ್ರೀ ಹೆಚ್.ನಾಗಪ್ಪ:- ಆ ಹಣ ಲ್ಯಾಪ್ಸ್ ಆಗಿಲ್ಲ ಯಾವಾಗ ಬೇಕಾದರೂ ಖರ್ಚು ಮಾಡಬಹುದು. ಪಟ್ಟಿ ತಡವಾಗಿ ಬಂದಿದ್ದರಿಂದ ಈ ರೀತಿಯಾಗಿದೆ. 96-97ರಲ್ಲಿ ಆ ಕೆಲಸಗಳೆಲ್ಲವನ್ನು ತೆಗೆದುಕೊಂಡು ಮುಗಿಸಿಕೊಡುತ್ತೇವೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಕೃಷಿ ಮಾರುಕಟ್ಟೆ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಉಪ ಪ್ರಶ್ನೆ ಕೇಳುತ್ತೇನೆ. ನಮ್ಮ ಕ್ಷೇತ್ರದಲ್ಲೂ ಅದೇ ರೀತಿ ಸಮಸ್ಯೆ ಇದೆ.

ಅಧ್ಯಕ್ಷರು:- ನನ್ನ ಕ್ಷೇತ್ರದಲ್ಲೂ ಕೂಡ ಅದೇ ರೀತಿ ಇದೆ. ಸ್ವಲ್ಪ ನಿಧಾನವಾದರೂ ಕೂಡ ಕೆಲಸ ಮಾಡುತ್ತಾರೆ. ನಿನ್ನೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಬಂದಿದ್ದರು ಅವರು ಒಳ್ಳೆಯವರು ಈಗ ಕೆಲಸ ನಡೆಯಬಹುದೆಂಬ ವಿಶ್ವಾಸ ಇದೆ. ಎಲ್ಲಾ ಕಡೆ ಆಗಿದೆ. ಅಂತಿಮಗೊಳಿಸುವುದೇ ಬಹಳ ತಡ ಮಾಡಿದರು.

ವಿಷಯ:- ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ಸುಗಳ ತೊಂದರೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 158 (1123)

ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಣಸೂರು ನಾಡ ವಿಭಾಗದ ಕೇಂದ್ರ ಸ್ಥಾನವಾಗಿದ್ದು ಬಹುದೊಡ್ಡ ತಾಲ್ಲೂಕು ಮತ್ತು ಬಹು ವಿಶಾಲ ಪ್ರದೇಶವನ್ನು ಹೊಂದಿದ್ದು, ಅನೇಕ ಗ್ರಾಮಾಂತರ ಪ್ರದೇಶಗಳಿಗೆ

ಬಸ್ಸುಗಳ ತೊಂದರೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅ) ಸರ್ಕಾರವು ಸದರಿ ತಾಲ್ಲೂಕಿಗೆ ಮಂಜೂರು ಮಾಡಿದ ಡಿಪೋ ಹಾಗೂ ಆ ದಿಸೆಯಲ್ಲಿ ನಡೆಯುತ್ತಿರುವ ಕೆಲಸ ಯಾವ ಹಂತದಲ್ಲಿದೆ.

ಇ) ಇನ್ನೂ ಎಷ್ಟು ದಿನಗಳಲ್ಲಿ ಸದರಿ ಡಿಪೋ ಸೌಲಭ್ಯ ಲಭ್ಯವಾಗಲಿದೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) ಈ ಉದ್ದೇಶಕ್ಕಾಗಿ ಮೂಕನಹಳ್ಳಿ ಗ್ರಾಮದಲ್ಲಿನ ಸರ್ವೆ ಸಂಖ್ಯೆ 120:2 ಮತ್ತು 120:3ಗಳಲ್ಲಿನ 5 ಎಕರೆ 18 ಗುಂಟೆ ನಿವೇಶನವನ್ನು ಭೂಸ್ವಾಧೀನಗೊಳಿಸಲು ಜಿಲ್ಲಾಧಿಕಾರಿ, ಮೈಸೂರು ಇವರನ್ನು ಕೋರಲಾಗಿದೆ.

ಇ) ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಘಟಕದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಸಿ.ಹೆಚ್.ವಿಜಯಶಂಕರ್:- ಮೂಕನಹಳ್ಳಿ ಗ್ರಾಮದ ಸರ್ವೆ ನಂ 120:2 120:3 ಇಲ್ಲಿ 5 ಎಕರೆ 18 ಗುಂಟೆ ನಿವೇಶನವನ್ನು ಭೂಸ್ವಾಧೀನಗೊಳಿಸಲು ಜಿಲ್ಲಾಧಿಕಾರಿ ಮೈಸೂರು ಇವರನ್ನು ಕೋರಲಾಗಿದೆ ಎಂದು ಉತ್ತರ ನೀಡಿದ್ದಾರೆ. ನನಗೆ ತಿಳಿದ ಸ್ಪಷ್ಟ ಮಾಹಿತಿ ಪ್ರಕಾರ ಈ ಭೂ ಸ್ವಾಧೀನ ಪ್ರಕ್ರಿಯೆ ಈಗಾಗಲೆ ಪೂರ್ಣಗೊಂಡಿದೆ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಲಿಕ್ಕೆ ಇಲಾಖಾ ಅಧಿಕಾರಿಗಳಿಗೆ ಸೂಚನೆ ಕೊಡಬೇಕು ಮತ್ತು ಈ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಿಸಿಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಗರ ಮತ್ತು ಗ್ರಾಮೀಣ ಸಾರಿಗೆಯನ್ನು ಉತ್ತಮಪಡಿಸುವ ದೃಷ್ಟಿಯಿಂದಾಗಿ ಅಲ್ಲಿ ಘಟಕದ ಅವಶ್ಯಕತೆ ಇತ್ತು ಅಲ್ಲಿ ಪ್ರಾರಂಭ ಮಾಡಬೇಕೆಂದು ಸಾರಿಗೆ ಸಂಸ್ಥೆಯ ಆಡಳಿತ ಮಂಡಲಿಯವರು ಈಗಾಗಲೇ ನಿರ್ಧಾರ ಮಾಡಿ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಸರಕಾರಿ ಜಮೀನು ಇಲ್ಲದೇ ಇರುವುದರಿಂದ 5 ಎಕರೆಗೂ ಹೆಚ್ಚು ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಕ್ರಮವನ್ನು ಜರುಗಿಸಿ ಈಗಾಗಲೇ 1 ಲಕ್ಷ 60 ಸಾವಿರ ರೂಪಾಯಿಯನ್ನು ಠೇವಣಿ ಇಟ್ಟಿದ್ದಾರೆ. ಅಲ್ಲಿರತಕ್ಕಂತಹ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿ ಇನ್ನು ಎಷ್ಟು ಹಣ ಬೇಕು ಎಂದು ಕೇಳಿದ್ದಾರೆ. ಅದನ್ನು ತಕ್ಷಣ ಬಿಡುಗಡೆ ಮಾಡಲಿಕ್ಕೆ ನಾವು ತಯಾರು ಇದ್ದೇವೆ. ಈ ಅಧಿವೇಶನ ಮುಗಿದ ನಂತರ ಅಕ್ವಿಸಿಷನ್ ಪ್ರೋಸಸ್ ಅನ್ನು ಪೂರ್ತಿ ಮಾಡಿಸಿ ಹಣವನ್ನು ಸಹ ಕಟ್ಟಿ ಕೆಲಸ ಪ್ರಾರಂಭ ಮಾಡತಕ್ಕಂತಹ ಕ್ರಿಯೆಯನ್ನು ಈ ವರ್ಷವೇ ಪ್ರಾರಂಭ ಮಾಡಿಸುತ್ತೇನೆ.

ವಿಷಯ:- ರಸ್ತೆ ಸಾರಿಗೆ ಸಂಸ್ಥೆಯ ವಿಭಾಗ ಪ್ರಾರಂಭ.